ನನಗಿಷ್ಟವೋ ಇಲ್ಲವೋ ಗೊತ್ತಿಲ್ಲ. ಅಂತೂ ಬಾಲ್ಯದಿಂದಲೇ ಕೋಳಿಗಳ ಜೊತೆ ನನ್ನ ಗೆಳೆತನ ಬೆಸೆದು ಹೋಯಿತು. ನಮ್ಮ ಏರಿಯಾದ ಜನ ಬಹು ಜತನದಿಂದ ಅವುಗಳ ಸಾಕುತ್ತಿದ್ದರು. ಆಗ ಕೋಳಿ ಮಾಂಸ ಮಾರುವ ಅಂಗಡಿಗಳು ಈಗಿನಂತೆ ಇರಲಿಲ್ಲ. ಬಾಯ್ಲರ್ ಹಾಗೂ ಫಾರ್ಮ್ ಕೋಳಿಗಳ ಜನನವೂ ನಡೆದಿತ್ತೋ ಇಲ್ಲವೋ ಗೊತ್ತಿಲ್ಲ. ಜನ ಹಬ್ಬ ಹರಕೆಗೆ, ನೆಂಟರು ಬಂದರೆ ಹಿಡಿದು ಕೊಯ್ಯಲು ತಮ್ಮ ಮನೆಗೆ ಸಾಕಾಗುವಷ್ಟು ಕೋಳಿಗಳ ಸಾಕಿರುತ್ತಿದ್ದರು. ಆ ಕಾಲಕ್ಕೆ ಕುರಿ ಮಾಂಸ ತಂದು ತಿನ್ನುವವರು ನಮ್ಮ ಪ್ರಕಾರ ಅಗರ್ಭ ಶ್ರೀಮಂತರೇ ಆಗಿದ್ದರು.

"ಕೆ.ಜಿ.ಗೆ ಹನ್ನೊಂದು ರೂಪಾಯಿ ಕೊಟ್ಟು ಕುರಿಮಾಂಸ ತಂದು ತಿನ್ನೋಕೆ ನಮ್ಮ ಕೈಲಿ ಎಲ್ಲಾಗುತ್ತೆ? ಹೊಟ್ಟೆ ತುಂಬೋಕಿಷ್ಟು ರಾಗಿ, ಹಿಡಿ ಅನ್ನದಷ್ಟು ಅಕ್ಕಿ ಹುಟ್ಟಿದರೆ ಸಾಕು" ಎಂದು ಕೊರಗುತ್ತಿದ್ದ ನಮ್ಮ ಮನೆಯ ಜನ ಮಾಂಸದಡಿಗೆಯ ಮುಖ ಕಂಡವರೇ ಅಲ್ಲ. ದೊಡ್ಡ ಹಬ್ಬಗಳು ಓಡೋಡಿ ಬಂದರೆ ನಾಲಿಗೆ ಮೇಲೆ ನಲಿಯುವಷ್ಟು ಬಾಡು ಸಿಗುತ್ತಿತ್ತು. ಅಲ್ಲೂ "ನನಗೆ ಬರೀ ಮೂಳೆಪೀಸು ಬಿತ್ತು, ನಿನಗೆ ನಲ್ಲಿ ತುಕ್ಡಾ ಬಿದ್ದಿದೆ, ಕಲೀಜಿ ಬಿದ್ದಿದ್ರೆ ಚೆನ್ನಾಗಿತ್ತು" ಎನ್ನುವ ಒಣ ಜಗಳಗಳೇ ನಮ್ಮಲ್ಲಿ ಜಾಸ್ತಿ ನಡೆಯುತ್ತಿದ್ದವು.

ಸ್ವಲ್ಪ ಸ್ವಲ್ಪವೇ ನೆಂಚಿಕೊಂಡು, ಇಡೀ ಊಟ ಮುಗಿಯುವ ತನಕ ಸಣ್ಣ ಮಾಂಸದ ತುಣುಕುಗಳನ್ನು ಕಾಪಾಡಿಕೊಳ್ಳುವುದೇ ಒಂದು ಸವಾಲಿನ ಕೆಲಸ ಎನಿಸುತ್ತಿತ್ತು. ನಮ್ಮಣ್ಣನೊಬ್ಬ ತನ್ನ ಪಾಲಿನ ತುಂಡುಗಳ ಅವಸರದಲ್ಲಿ ತಿಂದು ಮುಗಿಸಿ ನಮ್ಮ

